# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ.:27 ಫ್ರಾ.ಸಾ. : 09**

| | | |
|---|---|---|
| ಸಾಕ್ಷಿಯ ಹೆಸರು | : | ಪರ್ಜಾನ್ ಮುಲ್ಲಾ |
| ಗಂಡನ ಹೆಸರು | : | ಆಶಾಮುದ್ದಿನ್ ಮುಲ್ಲಾ |
| ವಯಸ್ಸು | : | 40 ವರ್ಷ |
| ಕೆಲಸ | : | ಗೃಹಿಣಿ |
| ವಾಸ | : | ಹಳಿಯಾಳ |

**ದಿನಾಂಕಃ 15-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1. ನಾನು ಈಗ ಹಳಿಯಾಳದ ಹೊಸೂರ ಗಲ್ಲಿಯಲ್ಲಿ ವಾಸವಾಗಿರುತ್ತೇನೆ. ನಮ್ಮ ಮನೆಯಲ್ಲಿ ನಾನು, ನನ್ನ ಗಂಡ ಹಾಗೂ ನಮ್ಮ ಇಬ್ಬರು ಮಕ್ಕಳು ವಾಸವಾಗಿರುತ್ತೇವೆ. ನನ್ನ ತವರು ಮನೆ ದಾಂಡೇಲಿಯಾಗಿರುತ್ತದೆ. ನಮ್ಮ ತಂದೆ-ತಾಯಿಗೆ ನಾವು ಒಟ್ಟು ನಾಲ್ಕು ಜನ ಮಕ್ಕಳು, ಅಂದರೆ ನಾನು, ನನ್ನ ತಂಗಿಯಾದ ರಿಜ್ವಾನಾ, ತಮ್ಮದಿರಾದ ಮಹಮ್ಮದ ಗೌಸ್ ಮತ್ತು ಈ ದಿನ ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯಾದ ಮುಸ್ತಾಕ್ ಆಗಿರುತ್ತೇವೆ. 2018 ರಲ್ಲಿ ನಾನು ನನ್ನ ಗಂಡನೊಂದಿಗೆ ದಾಂಡೇಲಿಯ ಗಾಂಧಿನಗರದಲ್ಲಿ ವಾಸವಾಗಿದ್ದೆ ಹಾಗೂ ನನ್ನ ತಂಗಿ ರಿಜ್ವಾನಾ ಸಹ ತನ್ನ ಗಂಡನೊಂದಿಗೆ ದಾಂಡೇಲಿಯ ಗಾಂಧಿನಗರದಲ್ಲಿ ಪ್ರತ್ಯೇಕವಾಗಿ ವಾಸವಾಗಿದ್ದಳು. ನನ್ನ ತವರು ಮನೆಯಲ್ಲಿ ನನ್ನ ತಾಯಿ, ನನ್ನ ತಮ್ಮಂದಿರಾದ ಮಹಮ್ಮದ ಗೌಸ್ ಹಾಗೂ ಆತನ ಪತ್ನಿ ಮತ್ತು ಮಕ್ಕಳು ಹಾಗೂ 2 ನೇ ಆರೋಪಿಯಾದ ಮುಸ್ತಾಕ್ ಮತ್ತು ಆತನ ಹೆಂಡತಿ ಇರುತ್ತಿದ್ದರು.

2. ಈಗ ನ್ಯಾಯಾಲಯದ ವಿಸಿಯಲ್ಲಿ ಕಾಣುತ್ತಿರುವ 3 ನೇ ಆರೋಪಿಯಾದ ಶಫಿ ನನ್ನ ಅತ್ತೆ ಮಗ ಅಂದರೆ ದೂರದ ಸಂಬಂಧಿಯಾಗಬೇಕು, ಆತನ ತಂದೆ-ತಾಯಿ ಉಳವಿಯಲ್ಲಿ ವಾಸವಾಗಿದ್ದರು, ಆದರೆ ಆತ ಎಲ್ಲಿ ವಾಸವಾಗಿದ್ದನು ಎಂದು ನನಗೆ ಗೊತ್ತಿಲ್ಲ. ಚಾಸಾ-28 ಆರ್ಫಾ ಯಾನೇ ರೇಷ್ಮಾ ರವರು ನನಗೆ ಗೊತ್ತಿಲ್ಲ. 2018 ರಲ್ಲಿ 2 ನೇ ಆರೋಪಿಯ ಬಳಿ ಅಶೋಕ ಲೇಲ್ಯಾಂಡ್ ಗೂಡ್ಸ್ ವಾಹನವನ್ನು ಓಡಿಸುತ್ತಿದ್ದನು. ಸುಮಾರು ವರ್ಷಗಳ ಹಿಂದೆ

ನನಗೆ ಅರಾಮ ಇಲ್ಲದ ಕಾರಣ, ನನ್ನ ತಾಯಿ ನನ್ನ ಮನೆಗೆ ಬಂದು ಉಳಿದುಕೊಂಡಿದ್ದರು. ಸುಮಾರು ವರ್ಷಗಳ ಹಿಂದೆ ಪೊಲೀಸರು ನನ್ನನ್ನು ಕಾರವಾರ ಪೊಲೀಸ್ ಠಾಣೆಗೆ ವಿಚಾರಣೆಗೆ ಕರೆದಿದ್ದರು. ಪೊಲೀಸ್ ಠಾಣೆಯಲ್ಲಿ ಪೊಲೀಸರು ನನ್ನ ತಮ್ಮನಾದ 2 ನೇ ಆರೋಪಿ ಎಲ್ಲಿರುತ್ತಾನೆ ಎಂದು ಕೇಳಿರುತ್ತಾರೆ. ನಾನು ಪ್ರತ್ಯೇಕವಾಗಿ ವಾಸವಾಗಿದ್ದ ಕಾರಣ, ಆತನ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳಿರುತ್ತೇನೆ. ಪೊಲೀಸರು 2 ಮತ್ತು 3 ನೇ ಆರೋಪಿಯನ್ನು ನಮ್ಮ ತಾಯಿ ಮನೆಗೆ ಕರೆದುಕೊಂಡು ಬಂದಿದ್ದನ್ನು ನಾನು ನೋಡಿರುವುದಿಲ್ಲ ಹಾಗೂ ಅವರಿಂದ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿದ್ದನ್ನು ನಾನು ನೋಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಎರಡು ಮೊಬೈಲ್ ಗಳನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ. 2 ಮತ್ತು 3 ನೇ ಆರೋಪಿಗಳನ್ನು ಪೊಲೀಸರು ಯಾಕೆ ನನ್ನ ತಾಯಿಯ ಮನೆಯ ಬಳಿ ಕರೆದುಕೊಂಡು ಬಂದಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. 2 ಮತ್ತು 3 ನೇ ಆರೋಪಿಗಳು ಜೈಲಿನಲ್ಲಿದ್ದಾರೆ ಎಂದು ಟಿವಿಯನ್ನು ನೋಡಿದ ಮೇಲೆ ನನಗೆ ತಿಳಿಯಿತು, ಆದರೆ ಯಾವ ಕಾರಣಕ್ಕಾಗಿ ಜೈಲಿನಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ನನ್ನನ್ನು 2 ಮತ್ತು 3 ನೇ ಆರೋಪಿಗಳೊಂದಿಗೆ ಮಾತನಾಡಲು ಬಿಡದ ಕಾರಣ, ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. 2 ಮತ್ತು 3 ನೇ ಆರೋಪಿಗಳು ಕೃತ್ಯ ಎಸಗಿರುವ ಬಗ್ಗೆ ತಿಳಿದು, ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ</u>**

3. ಚಾಸಾ-28 ಆರ್ಫಾ ರವರು ಯಾನೆ ರೇಷ್ಮಾ ರವರು 3 ನೇ ಆರೋಪಿಯಾದ ಶಫಿಯ ಹೆಂಡತಿ ಎಂದರೆ ಸರಿ. 2018 ರಲ್ಲಿ ನನ್ನ ಗಂಡನಿಗೆ ಗೋಕಾಕ ನಲ್ಲಿ ಕೆಲಸ ಸಿಕ್ಕಿದ್ದರಿಂದ, ಅವರು ನನ್ನನ್ನು ದಾಂಡೇಲಿಯಿಲ್ಲರುವ ನನ್ನ ತವರು ಮನೆಯಲ್ಲಿ ಬಿಟ್ಟು ಹೋಗಿದ್ದರು ಎಂದರೆ ಸರಿಯಲ್ಲ. ದಿಃ 13-10-2018 ರಂದು ನಾನು ಹಾಗೂ ನನ್ನ ತಾಯಿ ಸೇರಿ ಹಳಿಯಾಳದ ದರ್ಗಾ ನೋಡಲು ಹೋಗಿದ್ದೆವು ಎಂದರೆ ಸಾಕ್ಷಿಯು ಹೋಗಿದ್ದೆವು, ಆದರೆ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ದಿಃ14-10-2018 ರಂದು ನಾವು ನನ್ನ ತಮ್ಮನಾದ 2 ನೇ ಆರೋಪಿಯಾದ ಮುಸ್ತಾಕ್ ನ ಕಾರಿನಲ್ಲಿ ಉಳವಿಗೆ ಪಿಕ್‌ನಿಕ್ ಗೆ ಹೋಗಿದ್ದೆವು ಎಂದರೆ

ಸರಿಯಲ್ಲ. ಅದೇ ರೀತಿ ಆ ದಿನ 3 ನೇ ಆರೋಪಿಯಾದ ಶಫಿ ಹಾಗೂ ಆತನ ಹೆಂಡತಿಯೂ ಸಹ ಮೋಟಾರ್ ಸೈಕಲ್ ಮೇಲೆ ದಾಂಡೇಲಿಯಿಂದ ಉಳವಿಗೆ ಬಂದಿದ್ದರು ಎಂದರೆ ಸರಿಯಲ್ಲ. ಆ ದಿನ ನಾವು ಉಳವಿಯಲ್ಲಿರುವ 3 ನೇ ಆರೋಪಿ ಶಫಿಯ ಮನೆಯಲ್ಲಿ ಉಳಿದುಕೊಂಡಿದ್ದೆವು ಎಂದರೆ ಸರಿಯಲ್ಲ.

4. ದಿಃ 15-10-2018 ರಂದು 2 ನೇ ಆರೋಪಿ ಮುಸ್ತಾಕ್ ಗೆ ಬಹಳಷ್ಟು ಕರೆಗಳು ಬರುತ್ತಿದ್ದು, ನಾವು ಆತನನ್ನು ವಿಚಾರಿಸಿದಾಗ, ಆತ ನಮ್ಮ ಬಳಿ ತನ್ನ ಗಾಡಿ ಗೋವಾಗೆ ಬಾಡಿಗೆಗೆ ಹೋಗಿದೆ, ಗಾಡಿಯ ಚಾಲಕ ನನಗೆ ಕರೆ ಮಾಡುತ್ತಿದ್ದಾನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಿಃ 16-10-2018 ರಂದು 2 ನೇ ಆರೋಪಿ ಮುಸ್ತಾಕ್ ನು ತನ್ನ ಹೆಂಡತಿಯ ಹತ್ತಿರ ತಾನು ಕಾರವಾರಕ್ಕೆ ಹೋಗಿ ಬರುತ್ತೇನೆ ಎಂದು ಹೇಳಿ, ಹೋಗಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಅದಾದ ನಂತರ 2 ನೇ ಆರೋಪಿ ಮುಸ್ತಾಕ್ ನು, 3 ನೇ ಆರೋಪಿಯಾದ ಶಫಿಗೆ ಕರೆ ಮಾಡಿದ ಮೇರೆಗೆ, 3 ನೇ ಆರೋಪಿ ತನ್ನ ಮೋಟಾರ್ ಸೈಕಲ್ ಮೇಲೆ ಹೋಗಿ, ರಾತ್ರಿ ವಾಪಸ್ ಬಂದಿರುತ್ತಾನೆ ಎಂದರೆ ಸರಿಯಲ್ಲ. ವಾಪಸ್ ಬಂದ ನಂತರ 3 ನೇ ಆರೋಪಿಯಾದ ಶಫಿ ನಮ್ಮ ಬಳಿ 2 ನೇ ಆರೋಪಿ ಮುಸ್ತಾಕ್ ತನ್ನ ಕಾರ್ ನ್ನು ತೆಗೆದುಕೊಂಡು ದಾಂಡೇಲಿಗೆ ಹೋದ ಎಂದು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಮುಸ್ತಾಕ್ ನ ಹೆಂಡತಿ ಗರ್ಭಿಣಿಯಿದ್ದು, ಆಕೆಗೆ ಹೊಟ್ಟೆ ನೋವು ಬಂದ ಕಾರಣ, ದಿಃ 17-10-2018 ರಂದು ನಾವು ಆಕೆಯನ್ನು ದಾಂಡೇಲಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು ಎಂದರೆ ಸಾಕ್ಷಿಯು ನಾನು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. 2 ನೇ ಆರೋಪಿ ಮುಸ್ತಾಕ್ ಬರದೆ ಇದ್ದುದ್ದರಿಂದ ನಾವು ಆತನಿಗೆ ಕರೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ನಂತರ ನಾವು ಆತನ ಮೊಬೈಲ್ ಗೆ ನಾವು ಕರೆ ಮಾಡಿದ್ದರೂ ಸಹ ಆತ ಕರೆಗಳನ್ನು ಸ್ವೀಕರಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಆ ನಂತರ 2 ನೇ ಆರೋಪಿಯ ಮೊಬೈಲ್ ಸ್ವಿಚ್ ಆಫ್ ಆಗಿರುತ್ತದೆ ಎಂದರೆ ಸರಿಯಲ್ಲ.

5. ದಿಃ 26-10-2018 ರಂದು ಪೊಲೀಸರು 2 ಮತ್ತು 3 ನೇ ಆರೋಪಿಗಳನ್ನು ದಾಂಡೇಲಿಯ ನನ್ನ ತಾಯಿಯ ಮನೆಗೆ ಕರೆದುಕೊಂಡು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಪೊಲೀಸರು ಕರೆದುಕೊಂಡು ಬಂದ ಸಮಯದಲ್ಲಿ 2 ನೇ ಆರೋಪಿ ಮುಸ್ತಾಕ್ ನು ಮನೆಯ ಒಳಗೆ ಹೋಗಿ, 2 ಮೊಬೈಲ್ ಗಳನ್ನು ತಂದು ಹಾಜರುಪಡಿಸಿದ್ದು, ಅವುಗಳನ್ನು ಪೊಲೀಸರು ಜಪ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರು ನಮ್ಮ ಬಳಿ "1 ನೇ ಆರೋಪಿಯು ಪ್ರೇಮಕುಮಾರನನ್ನು ಕೊಲೆ ಮಾಡುವಂತೆ ಹೇಳಿದ ಮೇರೆಗೆ, 2 ನೇ

ಆರೋಪಿಯು ಪ್ರೇಮಕುಮಾರನನ್ನು ಕಾರವಾರದಿಂದ ತನ್ನ ಕಾರಿನಲ್ಲಿ ಆಕಳಗವಿಯ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಬಂದು, ಅಲ್ಲಿ 2 ಮತ್ತು 3 ನೇ ಆರೋಪಿಗಳು ಸೇರಿ ಸಂಜೆ 05–30 ಗಂಟೆ ಸಮಯದಲ್ಲಿ ಎರಡು ಕತ್ತಿಗಳಿಂದ ಪ್ರೇಮಕುಮಾರನ ಮೇಲೆ ಹಲ್ಲೆ ಮಾಡಿ, ಕಡಿದು ಕೊಲೆ ಮಾಡಿ, ಶವವನ್ನು ಅಲ್ಲಿಯೇ ಅರಣ್ಯದಲ್ಲಿಯೇ ಬಿಸಾಕಿ, ಆತನ ಮೈ ಮೇಲಿದ್ದ ಬಟ್ಟೆಗಳನ್ನು ಹಾಗೂ ಕೊಲೆ ಮಾಡಲು ಬಳಸಿದ ವಸ್ತುಗಳನ್ನು ಮತ್ತು ಕತ್ತಿಗಳನ್ನು ಹಾಗೂ 2 ನೇ ಆರೋಪಿಯು ಕೃತ್ಯದ ವೇಳೆ ಧರಿಸಿದ್ದ ಬಟ್ಟೆಗಳನ್ನು ಗಣೇಶ ಗುಡಿಯ ಕಾಳಿ ನದಿಯ ಸೇತುವೆ ಕೆಳಗೆ ನೀರಿನಲ್ಲಿ ಬಿಸಾಡಿರುತ್ತಾರೆ ಹಾಗೂ ಪ್ರೇಮಕುಮಾರನ ಮೈ ಮೇಲಿದ್ದ ಬಂಗಾರದ ಚೈನ್ ನ್ನು 3 ನೇ ಆರೋಪಿಯು ತಂದು ತನ್ನ ಮನೆಯಲ್ಲಿಟ್ಟುಕೊಂಡಿದ್ದು, ಈ ದಿನ ಆತನು ತೋರಿಸಿದ ಮೇರೆಗೆ, ಅದನ್ನು ಜಪ್ತುಪಡಿಸಿಕೊಂಡಿರುತ್ತೇವೆ, ಅದಲ್ಲದೇ 3 ನೇ ಆರೋಪಿಯು ಕೃತ್ಯದ ವೇಳೆ ಧರಿಸಿದ್ದ ಬಟ್ಟೆಗಳನ್ನು ಹಾಗೂ ಆತನ ಮೊಬೈಲ್ ಮತ್ತು ಆರೋಪಿಗಳು ಕೊಲೆ ಮಾಡಲು ಉಪಯೋಗಿಸಿದ ಎರಡು ಕತ್ತಿಗಳ ಪೈಕಿ ಒಂದನ್ನು ಮುಳುಗು ತಜ್ಞರ ಮೂಲಕ ವಶಪಡಿಸಿಕೊಂಡಿರುತ್ತೇವೆ ಎಂದು ಹೇಳಿರುತ್ತಾರೆ" ಎಂದರೆ ಸರಿಯಲ್ಲ.

6. ಆ ನಂತರ "ಮೃತ ಪ್ರೇಮಕುಮಾರನು ಕಾರವಾರದ ಬೈತಕೋಲ ಬಂದರಿನ ಶಿಪ್ಪಿಂಗ್ ಏಜೇನ್ಸಿ ಯಲ್ಲಿ ಕೆಲಸ ಮಾಡುತ್ತಿದ್ದು, ಅದೇ ಬಂದರಿನಲ್ಲಿ 1 ನೇ ಆರೋಪಿಯು ಸಹ ಶಿಪ್ಪಿಂಗ್ ಕಂಪನಿಯನ್ನು ನಡೆಸುತ್ತಿದ್ದು, ಮೃತನು ನಡೆಸುತ್ತಿದ್ದ ಶಿಪ್ಪಿಂಗ್ ಕಂಪನಿಯ ವ್ಯವಹಾರ ಚೆನ್ನಾಗಿ ನಡೆಯುತ್ತಿದ್ದ ಕಾರಣ, 1 ನೇ ಆರೋಪಿಗೆ ಪ್ರೇಮಕುಮಾರನ ಮೇಲೆ ವೈ ಮನಸ್ಸು ಉಂಟಾಗಿ, ಪ್ರೇಮಕುಮಾರನನ್ನು ಕೊಲೆ ಮಾಡಿ, ಸಾಯಿಸುವ ಉದ್ದೇಶದಿಂದ 1 ನೇ ಆರೋಪಿಯು ತನ್ನ ಸಂಗಡ ಕೆಲಸ ಮಾಡುತ್ತಿದ್ದ 2 ನೇ ಆರೋಪಿಗೆ ಪ್ರೇಮಕುಮಾರನನ್ನು ಕೊಲೆ ಮಾಡುವಂತೆ ತಿಳಿಸಿದ್ದು, ಅದರಂತೆ 2 ನೇ ಆರೋಪಿಯು 3 ನೇ ಆರೋಪಿಯ ಸಹಾಯ ಪಡೆದು, ಪ್ರೇಮಕುಮಾರನನ್ನು ಆಕಳಗವಿ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ, ಅಲ್ಲಿ 2 ಮತ್ತು 3 ನೇ ಆರೋಪಿಗಳು ಇಬ್ಬರು ಸೇರಿ ಕತ್ತಿಗಳಿಂದ ಪ್ರೇಮಕುಮಾರನ ಮೇಲೆ ಹಲ್ಲೆ ಮಾಡಿ, ಕಡಿದು, ಕೊಲೆ ಮಾಡಿರುತ್ತಾರೆ ಹಾಗೂ ಸಾಕ್ಷ್ಯ ನಾಶಪಡಿಸುವ ಸಲುವಾಗಿ ಕೊಲೆ ಮಾಡಲು ಉಪಯೋಗಿಸಿದ ವಸ್ತುಗಳನ್ನು ಹಾಗೂ ಮೃತನ ಮತ್ತು 2 ನೇ ಆರೋಪಿಯ ಬಟ್ಟೆಗಳನ್ನು ಕಾಳಿ ನದಿಯ ನೀರಿನಲ್ಲಿ ಬಿಸಾಡಿರುತ್ತಾರೆ" ಎಂದು ನನಗೆ ತಿಳಿದು ಬಂತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ದಿಃ 26–10–2018 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ–31 ಎಂದು ಗುರುತಿಸಲಾಯಿತು. ಘಟನೆಯ

ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ 2 ನೇ ಆರೋಪಿ ನನ್ನ ತಮ್ಮನಾದ ಕಾರಣ ಹಾಗೂ 3 ನೇ ಆರೋಪಿ ನನ್ನ ಅತ್ತೆ ಮಗನಾದ ಕಾರಣ, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದ**

7. ನನ್ನ ತಮ್ಮನಾದ 2 ನೇ ಆರೋಪಿ ದಾಂಡೇಲಿಯಲ್ಲಿಯೇ ಗೂಡ್ಸ್ ಗಾಡಿಯನ್ನು ಓಡಿಸುತ್ತಿದ್ದ ಎಂದರೆ ಸರಿ. ಆತ ಎಂದಿಗೂ ಕಾರವಾರಕ್ಕೆ ಕೆಲಸ ಬಂದಿಲ್ಲ ಎಂದರೆ ಸರಿ. 2 ಮತ್ತು 3 ನೇ ಆರೋಪಿಗಳು ಕೂಡಿ ಓಡಾಡಿರುವುದನ್ನು ನಾನು ನೋಡಿರುವುದಿಲ್ಲ. ಕಾರವಾರ ಪೊಲೀಸ್ ಠಾಣೆಯು ಕಾರವಾರದ ಯಾವ ಜಾಗದಲ್ಲಿ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಕಾರವಾರ ಪೊಲೀಸರು ನನ್ನನ್ನು ಎಂದಿಗೂ ವಿಚಾರಣೆಗೆ ಕರೆದಿರದ ಕಾರಣ ನನಗೆ ಪೊಲೀಸ್ ಠಾಣೆ ಎಲ್ಲಿದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಹಳಿಯಾಳದ ದರ್ಗಾಕ್ಕೆ ನಾನು ಹಾಗೂ ನನ್ನ ತಾಯಿ ಪ್ರತಿ ಗುರುವಾರ ಹೋಗುತ್ತೇವೆ. ಹಳಿಯಾಳದ ದರ್ಗಾಕ್ಕೆ ಹೋದಾಗ ಎಂದಿಗೂ ನಮ್ಮ ಜೊತೆ 2 ನೇ ಆರೋಪಿಯು ಬಂದಿರುವುದಿಲ್ಲ. 2 ನೇ ಆರೋಪಿಯ ಬಳಿ ಕಾರ್ ಇದ್ದುದ್ದನ್ನು ನಾನು ನೋಡಿರುವುದಿಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ವಿ.ಎನ್.ಎನ್ ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್.ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ